# ವೈದ್ಯರೇಕೆ ಪದೇ ಪದೇ ಮುಷ್ಕರ ಹೂಡುತ್ತಾರೆ?



■ ಡಾ. ಅರುಣಾ ಯಡಿಯಾಳ್

ವೈದ್ಯರಾದವರು ಜೀವ ಉಳಿಸುವ ಧನ್ಯತಾ ಕಾರ್ಯವನ್ನು ಬದಿಗಿಟ್ಟು ಏಕೆ ಪದೇ ಪದೇ ಬೀದಿಗಿಳಿಯುತ್ತಿದ್ದಾರೆ? ಸುಶಿಕ್ಷಿತರು, ಶಿಕ್ಷಣ ಇಲ್ಲದವರು, ಬುದ್ಧಿಜೀವಿಗಳು, ಮಾಧ್ಯಮದವರು, ಜನಸಾಮಾನ್ಯರು ಎಲ್ಲರೂ ಅವರವರ ಮೂಗಿನ ನೇರಕ್ಕೆ ಕಾಮೆಂಟುಗಳನ್ನು ಒಗೆಯುತ್ತಿದ್ದಾರೆ. ಬಹುತೇಕರದ್ದು ನಮ್ಮೆಡೆಗೆ ಅಸಹನೆ, ವ್ಯಂಗ್ಯ, ಅನುಮಾನ ಹಾಗೂ ಅಪನಂಬಿಕೆಗಳ ದೃಷ್ಟಿ. ಈವರೆಗೆ ಬಹುತೇಕ ಸಂದರ್ಭಗಳಲ್ಲಿ ನಿಮ್ಮೆಲ್ಲರ ಯಾವುದ್ಯಾವುದೋ ಸಮಸ್ಯೆಗಳಿಗೆ ಪರಿಹಾರ ನೀಡಿದ ವೈದ್ಯರು, ಇಂದು ಅವರನ್ನೇ ಕಾಡುತ್ತಿರುವ ಸಮಸ್ಯೆಗಳಿಗಾಗಿ ಬೀದಿಗಿಳಿಯುತ್ತಿದ್ದಾರೆ ಅಂದರೆ, ಅದರ ಹಿಂದೆ ಬಲವಾದ ಕಾರಣಗಳು ಇರಲೇಬೇಕಲ್ಲವೇ? ಆ ಕಾರಣಗಳನ್ನೇ ನಿಮ್ಮ ಮುಂದೆ ಹರವಿ ಹಾಕುವ ಪ್ರಯತ್ನವಿದು.

★ ಬಳ್ಳಾರಿಯ ಉರಿಬಿಸಿಲಿನಲ್ಲಿ ಮುಷ್ಕರ ಮಾಡಿ ಈಗ ಹದಿನೈದು ವರ್ಷಗಳೇ ಆಗಿ ಹೋದರೂ, ಅದರ ನೆನಪಿನ್ನೂ ನನಗೆ ಹಸಿಯಾಗಿಯೇ ಇದೆ! ನಮ್ಮ ಓರಗೆಯ, ಕೆಲವೊಮ್ಮೆ ನಮಗಿಂತ ಕಡಿಮೆ ಅಂಕ ತೆಗೆದ ಎಂಜಿನಿಯರರು ಐದಂಕಿ ಸಂಬಳ ಎಣಿಸುವ ವೇಳೆಗೆ, ಆಗಷ್ಟೇ ಕಿರಿಯ ವೈದ್ಯರಾಗಿ ಕಣ್ಣು ಬಿಡುತ್ತಿದ್ದ ನಮಗೆ, ನಮ್ಮ ಜೊತೆಗಿದ್ದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸಿಗುತ್ತಿದ್ದ ವಿದ್ಯಾರ್ಥಿ ವೇತನ ಕೇವಲ 1500ರಿಂದ 3000 ರೂಪಾಯಿ ಅಷ್ಟೆ! ಇದು ನಮ್ಮ ಊಟ, ತಿಂಡಿ, ವಸತಿಯ ಖರ್ಚಿಗೇ ಸಾಲದೆ, ಮನೆಯಿಂದಲೇ ದುಡ್ಡು ಕೇಳಿ ಪಡೆಯುವ ಪರಿಸ್ಥಿತಿ! ರಾಜ್ಯದಾದ್ಯಂತ ಅಂದು ನಾವು ಮಾಡಿದ ಮುಷ್ಕರದ  ಪರಿಣಾಮವಾಗಿ ಈಗ ಕಿರಿಯ ವೈದ್ಯರ ವೇತನದಲ್ಲಿ ಎಷ್ಟೋ ಚೇತರಿಕೆ ಕಂಡುಬಂದಿದೆ. ಅಂದು ಮುಷ್ಕರವನ್ನು ಸಾರ್ವಜನಿಕರ ಟೀಕೆಗೆ ಹೆದರಿ ಅರ್ಧದಲ್ಲೇ ಕೈಬಿಟ್ಟಿದ್ದರೆ ಕಿರಿಯ ವೈದ್ಯರ ಸ್ಥಿತಿ ಹಾಗೆಯೇ ಇರುತ್ತಿತ್ತು.

★ ಇತ್ತೀಚಿನ ವೈದ್ಯರ ಮುಷ್ಕರದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ವೈದ್ಯರು ಪಾಲ್ಗೊಂಡದ್ದು ವೈದ್ಯರ ಮೇಲಿನ ಹಲ್ಲೆಯನ್ನು ಖಂಡಿಸಲು! ರೋಗ ಉಲ್ಬಣಿಸಿದವರನ್ನೇ ಆಸ್ಪತ್ರೆಗೆ ಕರೆತರುತ್ತಾರೆ. ಅಲ್ಲಿ ಮುಂದೆ ಸಂಭವಿಸಬಹುದಾದ ಎಲ್ಲ ಸಾವುನೋವುಗಳಿಗೆ ವೈದ್ಯರನ್ನೇ ಹೊಣೆಗಾರರನ್ನಾಗಿ ಮಾಡಿ, ಅವರ ಮೇಲೆ ಹಲ್ಲೆ ನಡೆಸುವುದು ಎಷ್ಟು ಸರಿ? ಈ ರೀತಿಯ ಘಟನೆಗಳ ಹಿಂದೆ ಕುತ್ಸಿತ ಮನೋಭಾವ, ಪೂರ್ವಾಗ್ರಹಪೀಡಿತ ಮನಸ್ಸು, ಅಸಹಜ ನಿರೀಕ್ಷೆಗಳ ಕೈವಾಡವೂ ಇದೆಯಲ್ಲವೆ?

ಬೇಕೆಂದೇ ರೋಗಿಯನ್ನು ಸಾವಿನೆಡೆಗೆ ತಳ್ಳಿ ವೈದ್ಯರಿಗೆ ಆಗುವ ಲಾಭವಾದರೂ ಏನು? ರೋಗಿ ಹಾಗೂ ಸಂಬಂಧಿಕರು  ಅರ್ಥ ಮಾಡಿಕೊಳ್ಳಬೇಕಾದದ್ದು ರೋಗದ ಬಗ್ಗೆ! ರೋಗಿಯ ನೋವಿಗೆ, ಸಾವಿಗೆ ರೋಗ ಮುಖ್ಯ ಕಾರಣವೇ ಹೊರತು, ವೈದ್ಯರಲ್ಲ. ಬಹಳಷ್ಟು ಸಲ, ನಿಮ್ಮ ರೋಗವನ್ನು ತಂದಿಟ್ಟವರೂ ವೈದ್ಯರಲ್ಲ. ಅವರ ಮೇಲೆ ಹರಿ ಹಾಯುವುದು ಸರಿಯೂ ಅಲ್ಲ. ರೋಗ ಉಲ್ಬಣಿಸಲೂ ಬಹುದು, ರೋಗಿ ಚಿಕಿತ್ಸೆಗೆ ಸ್ಪಂದಿಸದೆ ಇರಲೂಬಹುದು, ಅಡ್ಡ ಪರಿಣಾಮಗಳೂ ಸಂಭವಿಸಬಹುದು! ನುರಿತ ವೈದ್ಯರ ಚಿಕಿತ್ಸೆಯ ಸಂದರ್ಭದಲ್ಲೂ ಇಂತಹ ಪ್ರಸಂಗಗಳು ಸಂಭವಿಸುತ್ತವೆ. ಎಲ್ಲ ರೀತಿಯ ಚಿಕಿತ್ಸೆಗಳ ನಂತರವೂ ಪರಿಸ್ಥಿತಿ ಕೈಮೀರಬಹುದು ಎನ್ನುವ ಚಿಂತನೆ ರೋಗಿಗಳ ಸಂಬಂಧಿಕರಲ್ಲೂ ಇರಬೇಕು.

ವೈದ್ಯರು ಚಿಕಿತ್ಸೆ ಮಾಡಬಲ್ಲರೇ ಹೊರತು ಪವಾಡಗಳನ್ನಲ್ಲ! ಅವರಿಗೆ ಯಕ್ಷಿಣಿ ವಿದ್ಯೆ ಗೊತ್ತಿಲ್ಲ. ದೈವಾಂಶ ಸಂಭೂತರೂ ಅಲ್ಲ. ನಿಮ್ಮ ಹಾಗೇ ತೃಣ ಮಾನವರು! ಕೆಲವೊಮ್ಮೆ ತಪ್ಪುಗಳು  ಅಚಾತುರ್ಯಗಳೂ ನಡೆಯಬಹುದು. ಹಾಗೇ ತಪ್ಪುಗಳೇ ನಡೆಯದ ವೃತ್ತಿ ಯಾವುದಿದೆ? ವಕೀಲರು ಕೇಸು ಸೋತರೆ, ಪೋಲಿಸರು ಕಳ್ಳನನ್ನು ಹಿಡಿಯಲಾಗದಿದ್ದರೆ, ಒಪ್ಪಿಕೊಂಡ ಸಮಯದಲ್ಲಿ ಮನೆಯನ್ನು ಎಂಜಿನಿಯರ್, ಕಂಟ್ರಾಕ್ಟರ್ ಮುಗಿಸಿಕೊಡದಿದ್ದರೆ, ಅವರನ್ನು ಸಮಾಜ ಹಿಗ್ಗಾ–ಮುಗ್ಗಾ ಥಳಿಸುತ್ತದೆಯೇ?

ಎಲ್ಲ ವೈದ್ಯರೂ ಪ್ರಾಮಾಣಿಕರು, ನೇರ ನಡೆಯವರು ಎಂದು ನಾನೂ ವಾದ